ಶ್ರೀ ವಾಟಾಳ್ ನಾಗರಾಜ್ : ಯುಗಾದಿ ಹಬ್ಬದಲ್ಲಿ ಬೇವು ಮತ್ತು ಬೆಲ್ಲ ತಿನ್ನುವುದು ಒಂದು ಸಂಪ್ರದಾಯ. ಆದರೆ ಇವರು ಬರೀ ಬೇವನ್ನೇ ಕೊಡುತ್ತಿದ್ದಾರೆ, ಬೆಲ್ಲ ಇಲ್ಲವೇ ಇಲ್ಲ, ಇವತ್ತು ಸಕ್ಕರೆ ಕೊಡುತ್ತಿಲ್ಲ. ಇದು ಬರೀ ಬೆಂಗಳೂರಿಗೆ ಸೀಮಿತವಲ್ಲ, ಎಲ್ಲಾ ಹಳ್ಳಿಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ ಹೀಗೆ ಆಗಿದೆ. ಎಣ್ಣೆ ಕೊಡುತ್ತಿಲ್ಲ. ಆಹಾರ ಕೊಡುತ್ತಿಲ್ಲ, ಕೊನೆಗೆ ನೀರೂ ಕೊಡುತ್ತಿಲ್ಲ, ಸರ್ಕಾರ ಇದಕ್ಕೆ ಏನು ವ್ಯವಸ್ಥೆ ಮಾಡಿದೆ? ಆಹಾರ ಮಂತ್ರಿಗಳು ಎಲ್ಲದಕ್ಕೂ ಈಗ ಬಂತು, ಇನ್ನು 5 ನಿಮಿಷಕ್ಕೆ ಬರುತ್ತದೆ, ಮನೆಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಇವತ್ತು ಎಣ್ಣೆ ತಲುಪಿಲ್ಲ, ಆಹಾರ ತಲುಪಿಲ್ಲ, ಅಕ್ಕಿ ತಲುಪಿಲ್ಲ, ಸಕ್ಕರೆ ತಲುಪಿಲ್ಲ. ಸರ್ಕಾರ ಈ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರು ಅಪೇಕ್ಷಿಸಿದಂತೆ ಯುಗಾದಿ ಹಬ್ಬದ ಪ್ರಯುಕ್ತ ಸನ್ಮಾನ್ಯ ಆಹಾರ ಮಂತ್ರಿಗಳಿಂದ ನಾವು ವಿಶೇಷವಾದ ಪ್ರಕಟಣೆಯನ್ನು ಒಂದು ಹೇಳಿಕೆ ಮುಖಾಂತರ ಇವತ್ತು ಅಥವಾ ನಾಳೆ ಮಾಡಿಸುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರತಿದಿನ ಪ್ರಕಟಣೆ. ಇದು ಹೇಳಿಕೆ ಅಲ್ಲ. ಈ ರೀತಿಯ ಹಾರಿಕೆ ಉತ್ತರ ಸರ್ಕಾರದಿಂದ ಬೇಡ. ನಮಗೆ ಬೇಕಾಗಿರತಕ್ಕದ್ದು ಸಕ್ಕರೆ, ಸಕ್ಕರೆ ಬೇಕು, ಅಕ್ಕಿ ಬೇಕು, ಎಣ್ಣೆ ಬೇಕು, ಆಹಾರ ಮಂತ್ರಿಗಳು ಹೇಳಿಕೆ ಕೊಡುತ್ತಾರೆ ಎಂದರೆ ಸಮಸ್ಯೆ ಬಗೆಹರಿಯುವುದಿಲ್ಲ.

ಅಧ್ಯಕ್ಷರು : ಯುಗಾದಿ ಪ್ರಯುಕ್ತ ಬೇವು ಬೆಲ್ಲ ಎಲ್ಲಾ ಸೇರಿಸಿ ನಾಳೆ ಪ್ರಕಟಣೆ ಕೊಡುತ್ತಾರೆ. ನಾಳೆ ಸ್ಟೇಟ್‌ಮೆಂಟ್ ಮಾಡುತ್ತಾರೆ ಎನ್ನುವ ಭರವಸೆಯನ್ನು ನಾನು ಸಭೆಗೆ ಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ : ಅವರ ಪ್ರಕಟಣೆಯಿಂದ...

ಅಧ್ಯಕ್ಷರು : ಅವರು ತಂದುಕೊಡುವುದಕ್ಕಾಗುತ್ತದೆಯೇ. ಸ್ಟೇಟ್‌ಮೆಂಟ್ ಮೂಲಕವೇ ಎಲ್ಲಾ ಆಗಬೇಕಾಗಿರುವುದು.

ಶ್ರೀ ವಾಟಾಳ್ ನಾಗರಾಜ್ : ಇದುವರೆಗೂ ಅವರು ಸ್ಟೇಟ್‌ಮೆಂಟ್ ಮಾಡುತ್ತಾ ಬಂದಿದ್ದಾರೆ. ಆದರೆ ಅವರು ಏನೂ ಮಾಡಿಲ್ಲ. ನೀವು ಸ್ಟೇಟ್‌ಮೆಂಟ್ ಬೇಡ ಎಂದರೆ ಸ್ಟೇಟ್‌ಮೆಂಟ್ ಬೇಡಬಿಡಿ.

ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಮಾನ್ಯ ಮುಖ್ಯ ಮಂತ್ರಿಗಳು

MR. SPEAKER : I am told tomorrow he is going to make a statement with reference to that.

ಕೋಲಾರ ಜಿಲ್ಲೆಯಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

+ಶ್ರೀ ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ನಾನು ಉಪಾಧ್ಯಕ್ಷರನ್ನು ಭೇಟಿ ಮಾಡಿ ನಮ್ಮ ಜಿಲ್ಲೆಯಲ್ಲಿ ಭಾನುವಾರದಿಂದ ವಿದ್ಯುತ್ ಸರಬರಾಜು ಆಗದಿರುವ ಬಗ್ಗೆ ಹೇಳಿದ್ದೇನೆ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಆಗುತ್ತಾ ಇಲ್ಲ, ಇದರ ಬಗ್ಗೆ ನಾನು ಅನೇಕ ಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇಲ್ಲೂ ಕೂಡಾ ಚರ್ಚೆಯಾಗಿದೆ. ಈ ಬಗ್ಗೆ ಮುಖ್ಯ ಮಂತ್ರಿಗಳ ಮನೆ ಎದುರಿಗೆ ಧರಣಿ ಸತ್ಯಾಗ್ರಹ ಕೂಡಾ ಮಾಡಿದ್ದಾಯಿತು. ಆದರೂ ಕೂಡ ಇದುವರೆವಿಗೂ ಪರಿಸ್ಥಿತಿ ಸುಧಾರಣೆಯಾಗಿಲ್ಲ. ಕಳೆದ 3 ದಿವಸಗಳಿಂದ ಟಿ.ವಿ.

ಪಾರ್ಥಸಾರಥಿ ಎನ್ನುವ ರೈತರೊಬ್ಬರು ಚಿಂತಾಮಣಿಯಲ್ಲಿ ಕೆಇಬಿ ಕಛೇರಿ ಮುಂದೆ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತಿಗೆ ಮೂರನೇ ದಿವಸವಾಗಿದೆ. ಇವತ್ತು ಬೆಳಿಗ್ಗೆ ಅವರ ಪರಿಸ್ಥಿತಿ ಗಂಭೀರವಾಗಿದೆ. ಇದುವರೆವಿಗೂ ಕೂಡಾ ಅಲ್ಲಿರತಕ್ಕ ಚೀಫ್ ಎಂಜಿನಿಯರ್ ಬೆಂಗಳೂರಿನಲ್ಲಿರುವ ಕೆಇಬಿ ಅಧ್ಯಕ್ಷರಾಗಲೀ ಅಲ್ಲಿ ಹೋಗ ಪರಿಸ್ಥಿತಿಯನ್ನು ನೋಡುವ ಕನಿಷ್ಟ ಸೌಜನ್ಯವನ್ನೂ ತೋರಿಸಿಲ್ಲ. ಇವತ್ತು ಜಿಲ್ಲೆಯಲ್ಲಿ ಬೆಳೆದುನಿಂತಿರುವ ತರಕಾರಿಗಳು ಒಣಗುತ್ತಿವೆ. ಆ ರೈತರ ಸಹನೆ ಮೀರುತ್ತಿದೆ. ಇಂತಹ ಪರಿಸ್ಥಿತಿ ಇದ್ದರೂ ಕೂಡಾ ಇದುವರೆವಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಸತತವಾಗಿ ಕಳೆದ 3 ದಿವಸಗಳಿಂದ ಅಲ್ಲಿ ವಿದ್ಯುತ್ ಸರಬರಾಜು ಆಗಿಲ್ಲ. ಕೆಇಬಿ ಕಛೇರಿ ಮುಂದೆ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಅವರ ಪರಿಸ್ಥಿತಿ ಗಂಭೀರವಾಗಿದೆ. ಅಲ್ಲಿ ಉಪವಾಸ ಕುಳಿತಿರುವವರನ್ನು ವಿಚಾರಿಸುವ ಸೌಜನ್ಯವನ್ನೂ ತೋರಿಸಿಲ್ಲ. ಇಂತಹ ಪರಿಸ್ಥಿತಿ ಕೇವಲ ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಾದ್ಯಂತ ಈ ಪರಿಸ್ಥಿತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗಾಗಿ ಸಹಜವಾಗಿ ರೈತರ ಸಹನೆ ಮೀರತಕ್ಕ ಮಟ್ಟ ಮುಟ್ಟುತ್ತಿದೆ. ನಾವೂ ಕೂಡಾ ಸಲಹೆಗಳನ್ನು ಕೊಟ್ಟಿದ್ದೆವು. ಈಗ ಏನು ಬೆಳೆ ಹಾಕಿದ್ದಾರೆ. ಆ ಬೆಳೆ ಬರುವವರೆಗೆ ಏಪ್ರಿಲ್ ಮಧ್ಯಭಾಗದವರೆಗೂ ಹೈಟೆನ್‌ಷನ್ ಪವರ್ ಕನ್‌ಸೂಮರ್ಸ್‌ಗೆ ಶೇಕಡ ಐವತ್ತರಷ್ಟು ವಿದ್ಯುತ್ ಕಡಿತವನ್ನು ಏನು ವಿಧಿಸಿದ್ದೀರಿ. ಅದನ್ನು ಶೇಕಡ 10 ರಷ್ಟು ಹೆಚ್ಚುವರಿ ಮಾಡಿ ಅದನ್ನು ರೈತರಿಗೆ ಕೊಡಿ. ಈಗ ಬೆಳೆದು ನಿಂತಿರತಕ್ಕಂಥ ಬೆಳೆಯನ್ನು ಕಾಪಾಡಿ ಎಂದು ವಿಧ ವಿಧವಾಗಿ ಮನವಿಯನ್ನು ಮಾಡಿದರೂ ಕೂಡ ಇಲ್ಲಿಯವರೆಗೆ ಸರಕಾರ ಆ ಕ್ರಮವನ್ನು ತೆಗೆದುಕೊಂಡಿಲ್ಲ. ಇವತ್ತು ಸಾವಿರಾರು ಎಕರೆಯಲ್ಲಿರುವ ಬೇಸಿಗೆ ಬೆಳೆ ಒಣಗಿ ರೈತರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಅದರ ಜೊತೆಗೆ ರೈತರ ಪ್ರಾಣ ಹರಣ ಆಗುವ ಭೀತಿ ಕೂಡ ಕಾಡುತ್ತಿದೆ. ನಿನ್ನೆ ಇದನ್ನು ಪ್ರಸ್ತಾಪ ಮಾಡಬೇಕೆಂದು ಪ್ರಯತ್ನ ಪಟ್ಟಿ ಆಗಲಿಲ್ಲ. ದಯಮಾಡಿ ತಕ್ಷಣವೇ ಕೆ.ಇ.ಬಿ. ಅಧ್ಯಕ್ಷರನ್ನು ಅಥವಾ ಚೀಫ್ ಇಂಜಿನಿಯರ್‌ರವರನ್ನು ಚಿಂತಾಮಣಿಗೆ ಕಳಿಸಿ ರೈತರ ಅಹವಾಲನ್ನು ಕೇಳಿ ಅದನ್ನು ಬಗೆಹರಿಸತಕ್ಕಂತಹ ಪ್ರಯತ್ನ ತಕ್ಷಣ ಆಗಬೇಕಾಗಿದೆ. ಅಲ್ಲಿ ಒಬ್ಬರು ಉಪವಾಸ ಕುಳಿತಿದ್ದಾರೆ. ಅವರು ಉಪವಾಸ ಕುಳಿತು 3 ದಿವಸ ಆಗಿದೆ. ಮೊದಲೇ ಅವರ ಆರೋಗ್ಯ ಸರಿ ಇರಲಿಲ್ಲ. ಇನ್ನೂ ಹತ್ತಾರು ರೈತರು ಉಪವಾಸ ಸತ್ಯಾಗ್ರಹ ಮಾಡತಕ್ಕಂತಹ ಕಾರ್ಯಕ್ರಮವನ್ನು ಹಾಕಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ಇದನ್ನು ಬಗೆಹರಿಸಬೇಕು. ಯಾರಾದರೂ ಹೋಗಿ ರೈತರ ಮನವೊಲಿಸಿ ಅವರ ತೊಂದರೆಯನ್ನು ನಿವಾರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ಕೇವಲ ಕೋಲಾರ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ರಾಜ್ಯದಾದ್ಯಂತ ಈ ಪರಿಸ್ಥಿತಿ ಇದೆ. ಇದರ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡುತ್ತೇವೆ. ಇನ್ನು 15ದಿವಸದೊಳಗೆ ಎಲ್ಲಾ ಮುಖಂಡರನ್ನು ಕರೆದು ಮಾತುಕತೆಯಾಡಿ ವಿದ್ಯುಚ್ಛಕ್ತಿ ತೊಂದರೆಯನ್ನು ಪರಿಹಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮೊಯಿಲಿಯವರು ಕಳೆದ ಶಾಸನ ಸಭೆಯಲ್ಲಿ ಹೇಳಿದ್ದರು. ಇವತ್ತಿನವರೆಗೂ ನಮ್ಮ ಯಾರನ್ನೂ ಕರೆದಿಲ್ಲ. ಪರಿಹಾರ ಮಾಡುತ್ತೇವೆಂದು ಹೇಳಿದ್ದಾರೆ, ಅದು ಆಗಿಲ್ಲ. ಗಡೀ ಪ್ರದೇಶವಾದ ನಮ್ಮಲ್ಲೂ ಈ ತೊಂದರೆ ಇದೆ. ಚಾಮರಾಜನಗರದಲ್ಲಿ ಒಂದು ವಾರದಿಂದ ಕರೆಂಟ್ ಇಲ್ಲ. ಇಡೀ ರಾಜ್ಯದ ಮೂಲೆ ಮೂಲೆಯಲ್ಲೂ ಈ ಪರಿಸ್ಥಿತಿ ಇದೆ. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ. ನಿಮ್ಮನ್ನೆಲ್ಲ ಕರೆಯುತ್ತೇವೆ, ಮಾತನಾಡುತ್ತೇವೆ, ಪರಿಹಾರ ಮಾಡುತ್ತೇವೆಂದು ಇದೇ ಸಭೆಯಲ್ಲಿ ಭರವಸೆ ಕೊಟ್ಟಿದ್ದೀರಿ. ಆದರೆ ಇವತ್ತಿನವರೆಗೂ ಮಾಡಲಿಲ್ಲ, ಅಲ್ಲದೆ ಈ ಮಾರ್ಚ್ 31 ರೊಳಗೆ 60 ಸಾವಿರ ಪಂಪುಸೆಟ್‌ಗಳಿಗೆ ವಿದ್ಯುತ್ ಅನ್ನು ಒದಗಿಸುತ್ತೇವೆಂದು ಹೇಳಿದ್ದರು. ಇದು ಇನ್ನು 25 ಸಾವಿರ ದಾಟಿಲ್ಲ. 31ನೇ ತಾರೀಖಿನೊಳಗೆ ಕಂಬ, ತಂತಿ, ವಿದ್ಯುಚ್ಛಕ್ತಿ

ಕೊಡುವುದಕ್ಕೆ ಆಗುತ್ತದೆಯೇ? ಇದೆಲ್ಲಾ ಬೇಜವಾಬ್ದಾರಿಯಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಮತ್ತು ಆಯವ್ಯಯದಲ್ಲಿ 60 ಸಾವಿರ ಪಂಪುಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿದಂತಹ ಇವರ ಭರವಸೆ ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂತಹ ಭರವಸೆಯಾಗುತ್ತಿದೆ. ಆದುದರಿಂದ ಸರಕಾರ ಈ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಿ ಇಲ್ಲಿ ಉತ್ತರ ಕೊಟ್ಟು ಇದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಂಗಾರುಪೇಟೆ ತಾಲ್ಲೂಕಿನ ಸಹಕಾರ ಸಂಸ್ಥೆಗಳು 10,000 ರೂಪಾಯಿ ಕೆಳಗೆ ವರಮಾನ ಇರತಕ್ಕಂತಹವರಿಂದ ಸಾಲ ವಸೂಲಿ ಮಾಡಲು ಪ್ರಾರಂಭ ಮಾಡಿದ್ದು ಹರಾಜನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಈ ತಿಂಗಳ 4 ರಂದು ತಮಗೆ ನೋಟೀಸು ಕೂಡ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಬೈರೇಗೌಡರು ಎತ್ತಿದಂತಹ ವಿಚಾರದ ಬಗ್ಗೆ ಒಂದು ಹೇಳಿಕೆ ಇದೆ. ಈಗ ನಾವು ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸುವ ಹಂತದಲ್ಲಿದ್ದೇವೆ. ಇದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರೂ ಕೂಡ ಕಾಗದ ಪತ್ರಗಳನ್ನು ಮಂಡಿಸಿದ ಮೇಲೆ....

ಅಧ್ಯಕ್ಷರು : ಜರೂರು ವಿಚಾರಗಳನ್ನು ಕೆಲವು ಸಾರಿ ಸದನದ ಯಾವುದೇ ಭಾಗದಿಂದ ಸದಸ್ಯರುಗಳು ಸದನದ ಗಮನ ಸೆಳೆಯಬೇಕೆಂದು ಹೇಳಿದರೆ ಅದನ್ನು ತಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ನಮ್ಮನ್ನು ನಾವೇ ನಿಯಂತ್ರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಸದನದ ಮುಂದೆ ಕಾಗದ ಪತ್ರಗಳನ್ನು ಮಂಡಿಸಿದ ಮೇಲೆ ಆಮೇಲೆ ನೋಡೋಣ.

ಸಭೆಯ ಮುಂದಿಡಲಾಡ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. Annual Administration Report of Upper krishna Project Command Area Development Authority Bheemarayanagudi for the year 1989-90 as required under Section 25 of Command Area Development Act, 1980.

2. 20th Annual Report and Accounts of Karnataka Film Industry Develpment Corporationn Ltd, for the year 1987-88.

3. 8th Annual Report of Jungle Lodges and Resorts Ltd, for the year 1987-88 as required under Section 619 (A) of the Companies Act, 1056.

II. Sri Dharam Singh Narayan Singh (Minister for Home) 2 leg to lay the

1. Third Annual Report of Karnataka State Police Housing Corporation Ltd, for the year 1987-88.

2. Fourth Annual Report of Karnataka State Police Housing Corporation Ltd, for the year 1988-89. as required under Section 619 (A) of the Companies Act, 1956.